ಬೆಳೆಸಿಕೊಂಡ ತೆರೆದ ಮನಸ್ಸನ್ನು ದುಡಿಸಿಕೊಂಡು ಬರೆದರಷ್ಟೆ ತೆರೆದ ಪುಸ್ತಕ ಪರೀಕ್ಷೆಯಲ್ಲಿ ಜಯ ಸಾಧ್ಯ.

### ಈಗ ಏಕೆ ಬೇಕು?

ಮೊದಲನೆಯದಾಗಿ ನಮ್ಮ ಶಿಕ್ಷಣ ಉದ್ದೇಶವೇನು ಎಂಬುದನ್ನು ನೋಡೋಣ. ಕಲಿಯುವವರ ಅರಿವು, ಆಲೋಚನೆ, ಧೋರಣೆ, ವರ್ತನೆ, ಕೌಶಲ ಮತ್ತು ಸಾಮರ್ಥ್ಯಗಳಲ್ಲಿ ಅಪೇಕ್ಷಿತ ಸಕಾರಾತ್ಮಕ ಬದಲಾವಣೆಯನ್ನು ತರುವುದೇ ಯಾವುದೇ ಶಿಕ್ಷಣದ ಉದ್ದೇಶ. ಹೀಗೆ ಫಲಿಸಿದ ಶಿಕ್ಷಣದಿಂದ ವ್ಯಕ್ತಿಯ ಸ್ವಂತ ವ್ಯಕ್ತಿತ್ವ ಸಮಗ್ರವಾಗಿ ಬೆಳೆಯಬೇಕು, ಬದುಕು ಹಸನಾಗಬೇಕು, ಮತ್ತು ವ್ಯಕ್ತಿಗಳ ಜವಾಬ್ದಾರಿಯುವ ಸಾಮಾಜಿಕ ಸ್ಪಂದನದಿಂದಾಗಿ ಕುಟುಂಬ, ಸಮುದಾಯ, ದೇಶದ ಅಭಿವೃದ್ಧಿಯೂ ಆಗಬೇಕು. ವ್ಯಕ್ತಿಯು ದೇಶದ ಉತ್ಪಾದಕತೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಲೇ, ನಮಗೆ ನಾವೇ ಕೊಟ್ಟುಕೊಂಡಿರುವ ಸಂವಿಧಾನದ ಆಶಯಗಳನ್ನು ಮನನ ಮಾಡಿಕೊಂಡು ಈ ದೇಶವನ್ನು ಕಟ್ಟುವ, ಸುಸ್ಥಿರಗೊಳಿಸುವ ಕಾಯಕದಲ್ಲಿ ಕೈಜೋಡಿಸುವಂತೆ ಸಜ್ಜಾಗಬೇಕು, ಇತ್ಯಾದಿ.

ಇದನ್ನು, ಪ್ರಾಥಮಿಕ, ಪ್ರೌಢ, ಉನ್ನತ ಶಿಕ್ಷಣ ಮತು ವಿವಿಧ ತರಬೇತಿ ಕ್ರಮದಲ್ಲಿ ಸಾಧಿಸುತ್ತಾ ಹೋಗಬೇಕು. ಇದಕ್ಕಾಗಿ, ಸರಕಾರದಲ್ಲಿ ಕೌದಿಯ ತರ ತೇಪೆ ತೇಪೆಯಲ್ಲದ, ಸಮಗ್ರವಾದ ಒಂದು ಯೋಜನೆ ಇರಬೇಕಾಗುತ್ತದೆ. ಶಿಕ್ಷಣವು ಸಮಾಜ ಮತ್ತು ಅದರ ಅಗತ್ಯಗಳು ಬದಲಾದ ಹಾಗೆ ಅದಕ್ಕೆ ತಕ್ಕಂತೆ ಮಾರ್ಪಡುವ ಜೈವಿಕ, ಚಲನಶೀಲ ಶಕ್ತಿಯನ್ನೂ ಹೊಂದಿರಬೇಕು. ಹೀಗಾಗಿ ಒಂದು ಸಮಾಜದ ಶೈಕ್ಷಣಿಕ ವ್ಯವಸ್ಥೆ ಆಯಾ ಕಾಲಕ್ಕೆ ತಕ್ಕ ಅಗತ್ಯಗಳು ಮತ್ತು ಶಾಶ್ವತ ಮೌಲ್ಯಗಳು ಇವೆರಡಕ್ಕೂ ಏಕಕಾಲಕ್ಕೆ ಸ್ಪಂದಿಸಬೇಕಾಗುತ್ತದೆ.

ಮತ್ತೆ ಈಗಿರುವ ಪರೀಕ್ಷಾ ಪದ್ಧತಿಗೆ ಮರಳುವುದಾದರೆ, ಮಕ್ಕಳು ಕೇವಲ 'ಮಕ್ಕಿಕಾ ಮಕ್ಕಿ' ಕಂಠಪಾಠ ಮಾಡುವ ಯಾಂತ್ರಿಕ ಮಟ್ಟಕ್ಕೆ ಇಳಿಸುತ್ತೇವೆ. ಇದರಿಂದ ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಗೆ ಯಾವುದೇ ಸಹಾಯ ಆಗುವುದಿಲ್ಲ. ಈಗಿರುವ ಪುಸ್ತಕಗಳು, ಅವುಗಳನ್ನು ಬೋಧಿಸುವ ವಿಧಾನಗಳು ಮಕ್ಕಳಲ್ಲಿ ಯಾವುದೇ ಆಸಕ್ತಿಯನ್ನು ಕೆರಳಿಸುವುದಿಲ್ಲ. ಮಕ್ಕಳು ಕಲಿಕೆಯಲ್ಲಿ ಭಾಗವಹಿಸದೇ, ಕೇವಲ ಪ್ರೇಕ್ಷಕರಾಗುತ್ತಾರೆ. ಹೀಗಾಗಿ ಅರ್ಥವಾಗದೇ ಇರುವ, ಬದುಕಿಗೆ ಸಂಗತವಲ್ಲದ ಮಾಹಿತಿಯನ್ನು ಹೇಗೆ ನೆನಪಿಡುವುದು? ಕೊನೆಯಲ್ಲಿ ಪರೀಕ್ಷೆಯಲ್ಲಿ ನಡೆಯುವುದು ವಿದ್ಯಾರ್ಥಿಗಳು ಎಷ್ಟು ಮಾಹಿತಿಯನ್ನು ನೆನಪಿಟ್ಟಿದ್ದಾರೆ ಎಂಬುದರ ಪರೀಕ್ಷೆ.

ಎರಡು/ಮೂರು ಭಾಷೆಗಳು, ಐದಾರು ವಿಷಯಗಳು, ಬರುಬರುತ್ತಾ ಗಾತ್ರ ಹೆಚ್ಚಾಗುತ್ತಿರುವ ಪಠ್ಯಪುಸ್ತಕಗಳು, ಮಾಹಿತಿಯ ಬೆಟ್ಟಗಳು. ಇರುವಷ್ಟೇ ಸಮಯದಲ್ಲಿ ಎಲ್ಲ ಪುಸ್ತಕಗಳಲ್ಲಿರುವ ಮಾಹಿತಿಯನ್ನು ವಿದ್ಯಾರ್ಥಿ ನೆನಪಿಡಬೇಕು ಎಂದರೆ, ಕಂಠಪಾಠ ಮಾಡಬೇಕಾದುದು ಅನಿವಾರ್ಯ. ಕೆಲವೊಮ್ಮೆ ಅರ್ಥವಾಗದೆಯೂ ಕಂಠಪಾಠ ಮಾಡುವುದರಿಂದ, ಅದಕ್ಕೆ ತಮ್ಮ ಮೆದುಳಿನಲ್ಲಿ ಉಳಿಸಿಕೊಳ್ಳಲು ಯಾವುದೇ ನೆನಪಿನ ಕೊಂಡಿಗಳು ಸಿಗುವುದಿಲ್ಲವಾದ್ದರಿಂದ ಅವು ಯಾವಾಗಬೇಕಾದರೂ ಆವಿ ಹೋಗುವಂತಿರುತ್ತವೆ. ಈ ಪದ್ಧತಿಯ ಪರೀಕ್ಷೆಗಳನ್ನು ನಡೆಸುವ ವಿಧಾನದಿಂದಾಗಿ ಪರೀಕ್ಷ ಕೊಠಡಿಯಲ್ಲಿ ಮೂಡಿರುವ ಭಯೋತ್ಪಾದಕ ವಾತಾವರಣದಲ್ಲಿ ಆತಂಕ, ಉದ್ವೇಗ, ಭೀತಿಯ ಕಾರಣದಿಂದಾಗಿ ಗೊತ್ತಿತ್ತು ಎನ್ನುವುದೂ ಮರೆತುಹೋಗುತ್ತದೆ.

ಇದನ್ನೂ ಮೀರಿ ಗಟ್ಟಿ ಉಳಿಯುವಷ್ಟು ಚೆನ್ನಾಗಿ ಉರುಹೊಡೆದಿರುವ ವಿದ್ಯಾರ್ಥಿಗಳು ಬಚಾವ್. ಎಲ್ಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮಟ್ಟಿಗೆ ಇದೇ ನಿಜವೆಂದು ಹೇಳುತ್ತಿಲ್ಲ, ಆದರೆ, ನಾವು ಒಂದು ವ್ಯವಸ್ಥೆಯನ್ನು ವಿಮರ್ಶೆ ಮಾಡುವಾಗ, ವ್ಯವಸ್ಥೆಯ ಹೊರಗಿನ ತಮ್ಮದೇ ಸ್ವಂತ ಪ್ರಯತ್ನದಿಂದ ಮಾಡಿದ ಸಾಧನೆಗಾಗಿ ವ್ಯವಸ್ಥೆ ಹೆಮ್ಮೆ ಪಟ್ಟುಕೊಳ್ಳುವಂತಿಲ್ಲ. ಸರ್ವೇಸಾಧಾರಣವಾಗಿ ವ್ಯವಸ್ಥೆಯ ಒಳಗಡೆಯೇ ಏನು ನಡೆಯುತ್ತದೆ ಎಂಬುದು ಇಲ್ಲಿ ಮುಖ್ಯ.

ಇವತ್ತು ಉದ್ಯೋಗ ಮಾರುಕಟ್ಟೆಯಲ್ಲಿ ಶಾಲಾಕಾಲೇಜುಗಳಲ್ಲಿ ಮಾಹಿತಿಯನ್ನು ಉರುಹೊಡೆದು ನೂರಕ್ಕೆ ನೂರು ಅಂಕ ತರುವ ಕುಡುಮಿಗಳಿಗೆ ಬೆಲೆಯಿಲ್ಲ. ನಿಜವೆಂದರೆ ಹೀಗೆ ಹೆಚ್ಚು ಅಂಕತಂದವರೂ ಮುಂಚೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಹೊತ್ತಿಗೆ ತಮ್ಮ ಅಧ್ಯಯನ, ವಿಶ್ಲೇಷಣೆ, ಪ್ರತಿಕ್ರಿಯೆ ಮತ್ತು ಅಭಿವ್ಯಕ್ತಿಯ ವಿಧಾನಗಳನ್ನು ತಿದ್ದಿಕೊಂಡಿರುತ್ತಾರೆ. ಇಲ್ಲವಾದರೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಇವರ ಕೌಶಲವು ಪ್ರಯೋಜನಕ್ಕೆ ಬರುವುದಿಲ್ಲ.

ಇಂದು ನೌಕರಿ ದಾತರು ನೋಡುವುದು ಐಕ್ಯು (ಇಂಟೆಲಿಜೆಂಟ್ ಕೋಷೆಂಟ್) ಅಲ್ಲ, ಬದಲಿಗೆ ಇಕ್ಯು (ಇಮೋಷನಲ್ ಕೋಷೆಂಟ್). ಈಗಿನ ಶಿಕ್ಷಣ ಮತ್ತು ಪರೀಕ್ಷಾ ಪದ್ಧತಿಯಲ್ಲಿ ಇವು ವಿದ್ಯಾರ್ಥಿಗಳಿಗೆ ರೂಢಿಯಾಗುವುದಿಲ್ಲ. ಇವುಗಳನ್ನು ಹೊರಗಡೆಯಿಂದ ಪಡೆದವರು ಅದೃಷ್ಟವಂತರಾಗುತ್ತಾರೆ, ಶಿಕ್ಷಣ ವ್ಯವಸ್ಥೆಯನ್ನೇ ಅವಲಂಬಿಸಬೇಕಾದವರು ಹಿಂದೆ ಬೀಳುತ್ತಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ನಾವು ಈಗ ಶಾಲೆಗಳಲ್ಲಿ ನೀಡುತ್ತಿರುವ ಶಿಕ್ಷಣ ತನ್ನ ಘೋಷಿತ ಉದ್ದೇಶವನ್ನೂ ಪೂರೈಸುವಲ್ಲಿ ಕೆಟ್ಟದಾಗಿ ಸೋಲುತ್ತಿದೆ. ಯುವಜನರನ್ನು ಅವರ ಬದುಕಿಗಾಗಿ ಸಜ್ಜುಗೊಳಿಸುವಲ್ಲಿ, ಜಾತ್ಯತೀತ ಗಣತಂತ್ರದ ಜವಾಬ್ದಾರಿಯುತ ನಾಗರಿಕರನ್ನಾಗಿ ಸಿದ್ಧಗೊಳಿಸುವಲ್ಲಿಯೂ ವಿಫಲವಾಗಿದೆ. ಈ ನಿಟ್ಟಿನಲ್ಲಿ ತೆರೆದ ಪುಸ್ತಕ ಪರೀಕ್ಷೆ ಪರಿಶೀಲನೆಗೆ ಅರ್ಹವಾಗಿದೆ.

### ಅಮೂಲಾಗ್ರ ಬದಲಾವಣೆ

ತೆರೆದ ಪುಸ್ತಕ ಪರೀಕ್ಷೆ ನಡೆಸುವುದು ಎಂದರೆ ನಿಜವಾಗಿಯೂ ಕ್ರಾಂತಿಕಾರಿ ಹೆಜ್ಜೆ ಎಂಬುದನ್ನು ಮರೆಯಬಾರದು. ಎಂದರೆ ಹಳೆಯ ವ್ಯವಸ್ಥೆಯನ್ನು ಹೆಚ್ಚು ಕಡಿಮೆ ಸಂಪೂರ್ಣವಾಗಿ ಅಳಿಸಿ ಹಾಕಿ ಅದರ ಮೇಲೆ ಹೊಸ ವ್ಯಾಖ್ಯಾನವನ್ನು ಬರೆಯುವುದು, ಅಷ್ಟೇ ಅಲ್ಲ ಅದನ್ನು ಜಾರಿಗೆ ತರುವುದು ಎಂದರ್ಥ. ಇದರಲ್ಲಿ ಒಳಗೊಳುವ ಬಾಧ್ಯಸ್ಥರು ಯಾರು, ಸಂಪನ್ಮೂಲಗಳು, ಸೌಕರ್ಯಗಳು ಏನು ಮತ್ತು ಆಗಬೇಕಾದ ಮೂಲಭೂತ ಬದಲಾವಣೆಯೇನು ಎಂಬುದನ್ನು ಸಂಕ್ಷಿಪ್ತವಾಗಿ ನೋಡೋಣ.

ಪಠ್ಯಕ್ರಮ, ಪಠ್ಯಪುಸ್ತಕ: ಹೊಸ ಉದ್ದೇಶಗಳನ್ನು ಪೂರೈಸಲು ಮೂಲಭೂತವಾಗಿ ಪಠ್ಯಕ್ರಮವನ್ನೇ ಬದಲಾಯಿಸಬೇಕಾಗುತ್ತದೆ. ವಿದ್ಯಾರ್ಥಿಯ ಸರ್ವಾಂಗೀಣ ಬೌದ್ಧಿಕ, ಮಾನಸಿಕ ಬೆಳವಣಿಗೆಯ ಉದ್ದೇಶವನ್ನೇ ಮುನ್ನುಡಿಗಳಲ್ಲಿ ಘೋಷಿಸಿದ್ದರೂ ಈಗಿನ ಪಠ್ಯಪುಸ್ತಕಗಳು ಅವುಗಳ ನೆರವೇರಿಕೆಗೆ ತಕ್ಕಂತೆ ಇಲ್ಲ. ಪಾಠಗಳು, ಅಭ್ಯಾಸಗಳನ್ನು ನಡೆಸುವವರು, ಪರಿಶೀಲಿಸುವ ಸಮಿತಿ ಸದಸ್ಯರು, ಅಧ್ಯಕ್ಷರುಗಳಿಗೆ ಇಲ್ಲವೇ ಇರುವುದರಲ್ಲೇ ಈ ಉದ್ದೇಶಗಳನ್ನು ಸಾಧಿಸುವುದು ಹೇಗೆ ಎಂಬ ಅರಿವು ಇಲ್ಲದೇ ಇರಬಹುದು, ಅಥವಾ ಅವರುಗಳು ಅಗೋಚರ ಒತ್ತಡಕ್ಕೆ ಮಣಿದು, ಏನೋ

